IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ‘ಭಾರತದ ಚರಿತ್ರೆ; ಡಾ. ಬಿ. ಆರ್. ಅಂಬೇಡ್ಕರ್ ದೃಷ್ಟಿಕೋನದ ವಿಶ್ಲೇಷಣೆ’

- ಡಾ. ಪ್ರದೀಪ್ ಎನ್ ವಿ
ಸಹಾಯಕ ಪ್ರಧ್ಯಾಪಕರು, ಇತಿಹಾಸ ವಿಭಾಗ
ಶರಾವತಿ ಪ್ರಥಮ ದರ್ಜೆ ಕಾಲೇಜು, ಕೋಣಂದೂರು.

**ಡಾ. ಬಿ. ಆರ್. ಅಂಬೇಡ್ಕರ್ ಕುರಿತಾಗಿ ಅಧ್ಯಯನ ಮಾಡಿದವರಿಗೆ ಅವರ ಬಹುಮುಖ ಪ್ರತಿಭೆಯ ಅರಿವಾಗುತ್ತದೆ. ಅರ್ಥಶಾಸ್ತ್ರಜ್ಞ, ರಾಜ್ಯಶಾಸ್ತ್ರ, ಸಾಮಾಜಶಾಸ್ತ್ರ, ತತ್ವಶಾಸ್ತ್ರ, ಮನಃಶಾಸ್ತ್ರಜ್ಞ, ಶಿಕ್ಷಣತಜ್ಞ, ಪತ್ರಿಕೋದ್ಯಮಿ, ಸಂಸದೀಯ ಪಟು, ವಕೀಲ, ಕಾನೂನುತಜ್ಞ, ಬರೆಹಗಾರ, ಭಾಷಣಕಾರ, ಕಳಕಳಿಯ ಹೋರಾಟಗಾರ. ಇಷ್ಟೆಲ್ಲದರ ಜೊತೆಗೆ ಅವರೊಬ್ಬರು ಮಾನವಪರ ನಿಷ್ಠುರವಾದಿ, ಸತ್ಯಶೋಧಕ ‘ಇತಿಹಾಸಕಾರ’. ಅವರ ಬರೆಹಗಳನ್ನು ಅಧ್ಯಯನ ಮಾಡಿದವರಿಗೆ ಈ ಎಲ್ಲಾ ಅಂಶಗಳು ಅನುಭವಕ್ಕೆ ಬರುತ್ತದೆ.**

**ಡಾ. ಅಂಬೇಡ್ಕರ್ ತಮ್ಮ ಬರೆಹಗಳಲ್ಲಿ ಭಾರತದ ಇತಿಹಾಸ ಕುರಿತು ಹೊಸಬೆಳಕು ಚೆಲ್ಲಿದ್ದಾರೆ. ಪ್ರಾಚೀನ ಮತ್ತು ಆಧುನಿಕ ಕಾಲದ ಅನೇಕ ಘಟನೆಗಳನ್ನು ಕುರಿತು ಆಳವಾಗಿ ಸಂಶೋಧನೆ ನಡೆಸಿ ಭಾರತದ ಚಾರಿತ್ರಿಕ ಘಟನೆಗಳನ್ನು ಪುನರ್ ರಚನೆ ಮಾಡಿದ್ದಾರೆ. ಭಾರತದಲ್ಲಿ ಜಾತಿಗಳ ಉಗಮ, ಪ್ರಾಚೀನ ಭಾರತೀಯ ಜನಾಂಗಗಳು, ಅವರ ಸಂಸ್ಕೃತಿ, ನಾಗರಿಕತೆ, ರಾಜಕೀಯ ಇತಿಹಾಸ, ಬೌದ್ಧಧರ್ಮದ ಉದಯ ಮತ್ತು ಪತನ, ಬುದ್ಧನ ಜೀವನ, ಸಾಧನೆ, ತತ್ವಬೋಧನೆ, ಸ್ವಾತಂತ್ರ್ಯ ಸಂದರ್ಭದಲ್ಲಿ ಭಾರತೀಯರ ವಿಮೋಚನೆ ಹೇಗೆ ಸಾಧ್ಯ, ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಅಸ್ಪೃಶ್ಯರು ಮತ್ತು ಅವರನ್ನು ಹೇಗೆ ನಡೆಸಿಕೊಳ್ಳಲಾಯಿತು, ಅವರ ಸ್ಥಾನಮಾನಗಳೇನಾಗಿದ್ದವು, ಹೀಗೆ ಅನೇಕ ವಿಷಯಗಳನ್ನು ಡಾ. ಅಂಬೇಡ್ಕರ್ ಅವರು ಸ್ಪಷ್ಟವಾಗಿ ಬರೆಯುವ ಮೂಲಕ ಭಾರತದ ನೈಜ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ದುರಂತವೆಂದರೆ ಡಾ. ಅಂಬೇಡ್ಕರ್ ಅವರು ಸಂಶೋಧಿಸಿ ದಾಖಲಿಸಿರುವ ಇತಿಹಾಸದ ಈ ಸಂಗತಿಗಳನ್ನು ಯಾವುದೇ ಇತಿಹಾಸದ ವಿದ್ವಾಂಸರಾಗಲಿ, ವಿದ್ಯಾರ್ಥಿಗಳಾಗಲಿ, ಸಂಶೋಧಕರಾಗಲಿ ಎತ್ತಿ ಹಿಡಿಯುವಲ್ಲಿ ವಿಫಲರಾಗಿದ್ದಾರೆ. ಡಾ. ಅಂಬೇಡ್ಕರ್ ಅವರು ಒಬ್ಬ ಇತಿಹಾಸಕಾರ ಎಂಬುದನ್ನೇ ಕಡೆಗಣಿಸಲಾಗಿದೆ. ಆ ಮೂಲಕ ಅವರ ವಾಸ್ತವ, ಜಾತ್ಯಾತೀತ, ಮಾನವೀಯ, ಸಮಾನತೆ ತತ್ವದಡಿಯಲ್ಲಿ ರಚನೆಯಾದ ಚರಿತ್ರೆಯನ್ನೇ ಸಮಾಧಿ ಮಾಡಲಾಗಿದೆ. ‘ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು’ ಎಂಬುದು ಡಾ. ಅಂಬೇಡ್ಕರ್ ಅವರ ನಿಲುವು. ಯಾವುದೇ ಇತಿಹಾಸಕಾರರಾಗಿ ಒಂದು ರಾಷ್ಟ್ರ ಅಥವಾ ಜನಾಂಗಕ್ಕೆ ಚರಿತ್ರೆ ಎಷ್ಟು ಮುಖ್ಯ ಎಂಬುದಕ್ಕೆ ಅವರ ಈ ನಿಲುವು ಮಾರ್ಗದರ್ಶನವಾಗುತ್ತದೆ. ಹಾಗೆಯೇ ಚರಿತ್ರೆಯ ರಚನೆಯಲ್ಲಿ ಒಂದು ಸಾಹಿತ್ಯ ಕೃತಿ ಎಷ್ಟು ಮುಖ್ಯ, ಅದು ಏನನ್ನು ಹೇಳುತ್ತದೆ ಎಂಬುದನ್ನು ಡಾ. ಅಂಬೇಡ್ಕರ್ ಹೀಗೆ ಹೇಳುತ್ತಾರೆ ‘ಯಾವುದೇ ಒಂದು ಸಾಹಿತ್ಯ ಕೃತಿ, ಅದು ತನ್ನ ಸಮಕಾಲೀನ ಸಮಾಜವನ್ನು ಪ್ರತಿನಿಧಿಸುವ, ಪ್ರತಿಬಿಂಬಿಸುವ ಒಂದು ಕನ್ನಡಿ’1. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಬರೆಹಗಳ ಬೆಳಕಲ್ಲಿ ಭಾರತದ ಚರಿತ್ರೆಯನ್ನು ಪುನರ್‌ರಚಿಸುವ, ಭಾರತವನ್ನು ಹೊಸದಾಗಿ ಕಟ್ಟುವ ಕೆಲಸ ಆರಂಭಿಸಬೇಕಾಗಿದೆ.**

ಭಾರತದ ಇತಿಹಾಸ ಏನಾಗಿದೆ? ಅದು ಅಪ್ಪಟ ಚರಿತ್ರೆಯಾಗಿದೆಯೇ? ಅದು ಯಾಕೆ ಹಾಗಾಗಿದೆ ಎಂಬುದರ ಬಗ್ಗೆ ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ 3ರ "ಪ್ರಾಚೀನ ಭಾರತದ ಉತ್ಪನನ" ಎಂಬ 5ನೇ ಅಧ್ಯಾಯದಲ್ಲಿ ಹೀಗೆ ಹೇಳುತ್ತಾರೆ. "ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಅಂದರೆ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎಂದಲ್ಲ. ಅದಕ್ಕೆ ತುಂಬಾ ಇತಿಹಾಸವುಂಟು. ಆದರೆ ಅದು ವಿರೂಪಗೊಂಡಿದೆ. ಬ್ರಾಹ್ಮಣ ಬರಹಗಾರರು ಉದ್ದೇಶ ಪೂರ್ವಕವಾಗಿ ಹೀಗೆ ಮಾಡಿರಬೇಕೆಂದು ಅನ್ನಿಸುತ್ತದೆ. ಅಂದರೆ ಇಂದು ನಾವು ಓದುವ ಪ್ರಾಚೀನ ಭಾರತದ ಇತಿಹಾಸ ನೈಜ ಇತಿಹಾಸವಲ್ಲ. ನೈಜ ಇತಿಹಾಸವನ್ನು ಬ್ರಾಹ್ಮಣಷಾಹಿ ಬರಹಗಾರರು ವಿರೂಪಗೊಳಿಸಿದ್ದಾರೆ. ಚಾರಿತ್ರಿಕ ಘಟನೆಗಳು, ವ್ಯಕ್ತಿಗಳು ಮತ್ತು ಇತಿಹಾಸವನ್ನು ಬ್ರಾಹ್ಮಣಶಾಹಿಗಳು ಉದ್ದೇಶಪೂರ್ವಕವಾಗಿ ಪುರಾಣಗಳನ್ನಾಗಿ, ಕಟ್ಟುಕತೆ, ದಂತಕತೆಗಳನ್ನಾಗಿಸಿದ್ದಾರೆ. ಚರಿತ್ರೆ ಕಾಲ್ಪನಿಕ ಎನಿಸುವಂತೆ ಮಾಡಿದ್ದಾರೆಂಬುದು ಡಾ. ಅಂಬೇಡ್ಕರ್‌ರವರ ಅಭಿಪ್ರಾಯ. ಇದೇ ಅಂಶವನ್ನು ಅರಬ್ ಇತಿಹಾಸಕಾರನಾದ ಅಲ್ಬರೂನಿ "ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ. ತಮ್ಮ ಚರಿತ್ರೆಯನ್ನು ಬರಹ ರೂಪದಲ್ಲಿ ದಾಖಲಿಸುವ ಕೆಲಸವನ್ನು ಅವರು ನಿರ್ಲಕ್ಷಿಸಿದ್ದಾರೆ. ಚರಿತ್ರೆಯ ಬಗ್ಗೆ ಕೇಳಿದರೆ ದಂತಕತೆ, ಪುರಾಣಗಳನ್ನು ಹೇಳುತ್ತಾರೆ" ಎಂದು ತಿಳಿಸುತ್ತಾನೆ. ಅಂದರೆ ಭಾರತದ ಚರಿತ್ರೆಯ ಬಹುಭಾಗ ಪುರಾಣಗಳಾಗಿವೆ ಎಂದಾಯಿತು.

ಡಾ. ಅಂಬೇಡ್ಕರ್ ಚರಿತ್ರೆ ಹೇಗೆ ಪುರಾಣವಾಗಿದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಸಾಬೀತು ಪಡಿಸುತ್ತಾರೆ. ನಾವೆಲ್ಲರೂ ಪೂಜಿಸುವ, ಆರಾಧಿಸುವ, ನಂಬುವ "ದೇವರು" ಎಂದರೆ ಯಾರು? ಅಸುರ, ರಾಕ್ಷಸ, ಯಕ್ಷ, ಗಣ, ಗಂಧರ್ವ ಎಂದರೆ ಏನು? ಎಂಬುದನ್ನು ಚರ್ಚಿಸುತ್ತಾರೆ. "ದೇವರು" ಎಂಬ ಪದ ಅದು ಒಂದು ಜನ ವಿಶೇಷವೆಂಬುದಾಗಿ, ಮಾನವ ಕುಟುಂಬದ ಸದಸ್ಯರು ಎಂಬ ಅರ್ಥವನ್ನು ಮೂಡಿಸುವುದಿಲ್ಲ. ಅದು ಒಂದು ಅತಿಮಾನವ ಕರ್ತೃಗಳಂತೆ ಕಾಣುತ್ತದೆ. ಇದರಿಂದಾಗಿ ಆ ಪದದ ಚಾರಿತ್ರಿಕ ಅಂಶಗಳು ಹೊರಟುಹೋಗಿ ಪುರಾಣವಾಗಿ, ದೈವಾಂಶಗಳು ಸೇರಿಕೊಂಡಿವೆ ಎಂಬುದು ಡಾ. ಅಂಬೇಡ್ಕರ್ ವಿಶ್ಲೇಷಣೆ. ದೇವ ಅಥವಾ ದೇವರು ಎಂಬುದು ಪ್ರಾಚೀನ ಭಾರತದಲ್ಲಿ ಜೀವಿಸುತ್ತಿದ್ದ ಒಂದು ಜನಾಂಗ. 'ದೇವ' ಎಂಬುದು ಒಬ್ಬ ವ್ಯಕ್ತಿಯನ್ನು, "ದೇವರು" ಎಂಬುದು ಇಡಿ ಆ ಜನ ಸಮುದಾಯವನ್ನು ಗುರುತಿಸುವ ಪದಗಳಾಗಿವೆ. ಆರ್ಯರಲ್ಲಿ ದೇವ ಎಂಬ ಜನವರ್ಗವಿತ್ತು. ಅವರು ಆರ್ಯರೇ ಆದರೂ ಅವರ ಸ್ಥಾನ ಮತ್ತು ಶೌರ್ಯ ಹೆಚ್ಚಿನದೆಂದು ತಿಳಿಯಲಾಗುತ್ತಿತ್ತು. ಈ ಬಲಿಷ್ಠ ಶೌರ್ಯವಂತ ದೇವರು ಆರ್ಯರನ್ನು ಶತೃಗಳಿಂದ ರಕ್ಷಿಸುತ್ತಿದ್ದರು. ಆದ್ದರಿಂದ ಆರ್ಯರು ಯಜ್ಞಗಳೆಂಬ ಆಚರಣೆಗಳ ಹೆಸರಿನಲ್ಲಿ ದೇವರಿಗೆ ಮದ್ಯ, ಮಾಂಸದೂಟ ಮತ್ತು ಮಾನಿನಿಯರನ್ನು ಅರ್ಪಿಸುತ್ತಿದ್ದರು. ಆರ್ಯಸಂಸ್ಕೃತಿ, ನಾಗರಿಕತೆಗಳಲ್ಲಿ ಹುಟ್ಟಿಕೊಂಡ ದೇವರು, ಯಜ್ಞ, ಯಾಗ, ಪೂಜೆ ಇವೆಲ್ಲವುಗಳಿಗೆ ಇದೇ ಮೂಲ. ಇದರ ಅರ್ಥ ಇಷ್ಟೆ. ದೇವರು ಎಂಬುವವರು ಮನುಷ್ಯರೇ ಆಗಿದ್ದರು. ಆರ್ಯರಲ್ಲಿ ಬಲಿಷ್ಠರಾಗಿದ್ದರು. ಅವರು ವ್ಯಭಿಚಾರಿಗಳೂ ಆಗಿದ್ದರು. ಆದರೆ ಆರ್ಯರಿಗೆ ಪೂಜಾರ್ಹರಾಗಿದ್ದರು. "ಬೌದ್ಧ ಸಾಹಿತ್ಯವು ದೇವ ಎಂಬುವವರು ಮಾನವ ಜೀವಿಗಳ ಒಂದು ಸಮುದಾಯ ಎಂಬುದನ್ನು ತೋರಿಸುತ್ತದೆ. ಅನೇಕ ಜನ ದೇವರು ಬುದ್ಧನನ್ನು ಕಂಡು ತಮ್ಮ ಸಂಶಯಗಳನ್ನೂ ಸಂಕಷ್ಟಗಳನ್ನು ನಿವಾರಿಸಿಕೊಂಡಿದ್ದಾರೆ. ದೇವರು ಮನುಷ್ಯರಲ್ಲದೇ ಹೋಗಿದ್ದರೆ ಇದು ಹೇಗೆ ಸಾಧ್ಯ?"2 ಅಂದರೆ ಜನಸಮುದಾಯಗಳು, ವ್ಯಕ್ತಿಗಳು ಹೇಗೆ ಪೌರಾಣಿಕವಾಗಿ, ದೈವಿಕವಾಗಿ, ಕಾಲ್ಪನಿಕವಾಗಿ ಹೋಗಿದ್ದಾರೆ. ಚರಿತ್ರೆಯಾಗಿರಬೇಕಾಗಿದ್ದ ಎಷ್ಟೋ ಜನಾಂಗಗಳು ಹೇಗೆ ನಂಬಲಾಗದ ರೀತಿ ಪುರಾಣಗಳಾಗಿ, ಕಥೆ ಕಾವ್ಯಗಳಾಗಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಮೂಲೆಗುಂಪಾಗಿವೆ ಡಾ. ಅಂಬೇಡ್ಕರ್ ಮುಂದುವರೆದು ಹೇಳುತ್ತಾರೆ. "ದೇವ ಪದದ ಜೊತೆಗೆ ಯಕ್ಷ, ಗಣ, ಗಂಧರ್ವ, ಕಿನ್ನರ ಈ ಹೆಸರುಗಳೂ ಕಂಡುಬರುತ್ತವೆ. ಅವರೆಲ್ಲ ಯಾರು ? ಮಹಾಭಾರತ ಮತ್ತು ರಾಮಾಯಣಗಳನ್ನು ಓದಿದಾಗ ನಮಗೆ ಅವರು ಭೂಮಿಯನ್ನೆಲ್ಲಾ ಆವರಿಸಿಕೊಂಡ, ಆದರೆ ನಿಜವಾಗಿ ಅಸ್ತಿತ್ವದಲ್ಲಿರದ ಕಾಲ್ಪನಿಕ ಜೀವಿಗಳಿರಬೇಕೆಂಬ ಭಾವನೆ ಬರುತ್ತದೆ.

ಆದರೆ ಯಕ್ಷ, ಗಣ, ಗಂಧರ್ವ, ಕಿನ್ನರರು ನಿಜವಾಗಿ ಮಾನವಕುಲದ ಸದಸ್ಯರು. ಅವರೆಲ್ಲಾ ದೇವ ಎಂಬ ಜನರ ಊಳಿಗದಲ್ಲಿರುವವರು. ಯಕ್ಷರು ಅರಮನೆಗಳನ್ನು ಕಾಯುತ್ತಿದ್ದವರು. ಗಣ ಎಂಬುವವರು ದೇವರ ಕಾವಲಿನವರು (ಬಾಡಿಗಾರ್ಡ್ಸ್) ಗಂಧರ್ವರು ತಮ್ಮ ಸಂಗೀತ ಮತ್ತು ನೃತ್ಯದಿಂದ ದೇವರನ್ನು ರಂಜಿಸುತ್ತಿದ್ದವರು. ಕಿನ್ನರರೂ ಕೂಡ ದೇವರ ಊಳಿಗದಲ್ಲಿದ್ದವರು. ಈ ಕಿನ್ನರರ ವಂಶಜರು ಈಗಲೂ ಹಿಮಾಚಲ ಪ್ರದೇಶದಲ್ಲಿ ವಾಸವಾಗಿದ್ದಾರೆ'.3 ಅಂದರೆ ಇವರೆಲ್ಲಾ ಮನುಷ್ಯ ಜೀವಿಗಳಾಗಿದ್ದವರು. ಪ್ರಾಚೀನ ಆರ್ಯರ ನಾಗರಿಕತೆಯಲ್ಲಿ ಇದ್ದ ಜನಸಮುದಾಯಗಳು ಎಂಬುದು ವಾಸ್ತವವಾದ ಚರಿತ್ರೆಯಾಗಿದೆ. ಡಾ. ಅಂಬೇಡ್ಕರ್ ಅಸುರ, ರಾಕ್ಷಸ, ದೈತ್ಯದಾನವ ಮೊದಲಾದವುಗಳ ಬಗ್ಗೆ ಕೂಡ ಚರ್ಚಿಸುತ್ತಾರೆ. 'ರಾಮಾಯಣ, ಮಹಾಭಾರತಗಳಲ್ಲಿ ವರ್ಣಿಸುವ ಪ್ರಕಾರ ಇವರು ಮಾನವೇತರ ಪ್ರಪಂಚಕ್ಕೆ ಸೇರಿದವರು. ಇವರು ಹತ್ತು ಗಾಡಿಯಷ್ಟು ಆಹಾರ ತಿನ್ನುತ್ತಿದ್ದರು. ಆರು ತಿಂಗಳ ಕಾಲ ನಿದ್ರಿಸುತ್ತಿದ್ದರು. ಅವರಿಗೆ ಹತ್ತು ಬಾಯಿಗಳು, ಕೋರೆ ಹಲ್ಲುಗಳು ಇದ್ದವು. ಈ ಮಾದರಿಯ ಮಾನವ ಸೃಷ್ಟಿ, ಸಾಧ್ಯವೇ ? ಇದು ಇಲ್ಲ. ಈ ಜನಾಂಗ ಅಥವಾ ಜನಸಮುದಾಯಗಳ ಗುಣ ಲಕ್ಷಣಗಳನ್ನೂ ಸಹ ತಿರುಚಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. "ಈ ಅಸುರ, ರಾಕ್ಷಸ ಎಂಬುವವರೂ ಕೂಡ ಜನ –ವಿಶೇಷ ಎನಿಸುವ ಮನುಷ್ಯ ಜೀವಿಗಳು, ಅಸುರರು ಸೃಷ್ಟಿಕರ್ತನಾದ ಪ್ರಜಾಪತಿಯ ವಂಶಜರೆಂದು ಶತಪಥಬ್ರಾಹ್ಮಣವು ಹೇಳುತ್ತದೆ. ಅಂಥವರು ಹೇಗೆ ದುಷ್ಟಶಕ್ತಿಗಳಾದರೋ ತಿಳಿಯದು. ಆದರೆ ಅವರು ದೇವರುಗಳ ವಿರುದ್ಧ ಭೂಮಿಯ ಒಡೆತನಕ್ಕಾಗಿ ಹೋರಾಡಿದರು. ದೇವರುಗಳಿಂದ ಪರಾಜಿತರಾದವರು ಹಾಗೂ ಕೊನೆಗೆ ಅವರಿಗೆ ಬಲಿಬಿದ್ದರೆಂಬ ಸಂಗತಿಯಂತೂ ನಮೂದಿತವಾಗಿದೆ. ಇದರಿಂದ ಸ್ಪಷ್ಟವಾಗುವ ವಿಷಯವೇನೆಂದರೆ ಅಸುರರು ಮಾನವಕುಲದ ಸದಸ್ಯರೇ ಹೊರತು, ರಾಕ್ಷಸರಲ್ಲ'4 ಎನ್ನುವ ಮೂಲಕ ಅಂಬೇಡ್ಕರ್ ಭಾರತದ ಪ್ರಾಚೀನ ಜನವರ್ಗಗಳ ಮೇಲೆ ಹೊಸ ಬೆಳಕು ಚಲ್ಲುತ್ತಾರೆ.

ಈ ಮೇಲಿನ ಚರ್ಚೆ ಪ್ರಾಚೀನ ಭಾರತದ ಸಿಂಧೂ ಬಯಲಿನ ನಾಗರಿಕತೆ ಹಾಗೂ ವೇದಗಳ ಕಾಲದ ಆರ್ಯರ ನಾಗರಿಕತೆಗಳ ನಡುವಿನ ಸ್ಥಾಪನೆ ಮತ್ತು ಸಂಘರ್ಷದ ಚರ್ಚೆಯಾಗಿದೆ. ಆರ್ಯರು ಬರುವುದಕ್ಕೆ ಮುಂಚೆ ಇದ್ದದ್ದು ಸಿಂಧೂನಾಗರಿಕತೆ, ಇದರ ನಿರ್ಮಾಪಕರು ದ್ರಾವಿಡರು. ಅಂದರೆ ಇದೇ ಅಸುರ, ರಾಕ್ಷಸ, ದೈತ್ಯ ಮೊದಲಾದವರು ತಮ್ಮ ತಮ್ಮ ಸಂಸ್ಕೃತಿ, ನಾಗರಿಕತೆ, ಜನಾಂಗಗಳ ಉಳಿವು ಮತ್ತು ವಿಸ್ತರಣೆಗಾಗಿ ಆರ್ಯರು ಮತ್ತು ದ್ರಾವಿಡರ ನಡುವೆ ಸಂಘರ್ಷ ನಡೆದಿರುವುದು ವಾಸ್ತವ. ನಮ್ಮ ಹಲವು ಪುರಾಣಗಳು, ರಾಮಾಯಣ, ಮಹಾಭಾರತದಂತಹ ಕಾವ್ಯಗಳು, ಜನಪದ ಕಾವ್ಯಗಳಲ್ಲಿ ಈ ಸಂಘರ್ಷವನ್ನು ನೋಡುತ್ತೇವೆ. ವೇದಗಳಲ್ಲಿ ಆರ್ಯದ್ರಾವಿಡ ಸಂಘರ್ಷದ ಉಲ್ಲೇಖಗಳಿವೆ. ಈ ಸಾಂಸ್ಕೃತಿಕ, ಚಾರಿತ್ರಿಕ ಹೋರಾಟದಲ್ಲಿ ಗೆದ್ದ ಆರ್ಯರು ಸೋತ ಮೂಲನಿವಾಸಿ ದ್ರಾವಿಡರೆನಿಸಿದ್ದ ವಿವಿಧ ಬುಡಕಟ್ಟು ಜನಸಮುದಾಯಗಳನ್ನು, ಅವರ ಸಂಸ್ಕೃತಿ, ನಾಗರಿಕತೆಗಳನ್ನು ತಮ್ಮ ಸಾಹಿತ್ಯದಲ್ಲಿ ತಿರುಚಿ ಬರೆದರು. ವಿಕೃತವಾಗಿ ಚಿತ್ರಿಸಿದರು. ಇದು ನಮ್ಮ ತಪ್ಪು ತಿಳುವಳಿಕೆಗೆ ಕಾರಣವಾಯಿತು. ಇಂದಿಗೂ ಸಹ ಯಾವ ನಮ್ಮ ಇತಿಹಾಸಕಾರ ಕೂಡ ಈ ತಪ್ಪನ್ನು, ಅಸ್ಪಷ್ಟ ಪ್ರಾಚೀನ ಭಾರತೀಯ ಚರಿತ್ರೆಯ ಕಗ್ಗಂಟನ್ನು, ಗೊಂದಲವನ್ನು ಸ್ಪಷ್ಟಪಡಿಸುವ, ಸತ್ಯಶೋಧಿಸುವ ಸಾಹಸಕ್ಕೆ ಕೈಹಚ್ಚುವುದೇ ಇಲ್ಲ. ಈ ಮಾದರಿಯ ಚಾರಿತ್ರಿಕ ದೃಷ್ಟಿಕೋನಗಳನ್ನು, ಚಿಂತನೆಗಳನ್ನು ಇಂದಿನ ಯಾವ ಇತಿಹಾಸಕಾರ ಕೂಡ ಒಪ್ಪುವುದಿಲ್ಲ.

ಒಂದು ಕಾಲಘಟ್ಟದ ನಂತರದ ಪ್ರಾಚೀನ ಭಾರತದ ಇತಿಹಾಸವನ್ನು ಇಂದಿನ ತನಕವೂ ಅರ್ಥಮಾಡಿಕೊಳ್ಳಬೇಕಾದರೆ ಡಾ. ಅಂಬೇಡ್ಕರ್‌ರ ದೃಷ್ಟಿಕೋನ ಕೂಡ ಮುಖ್ಯವಾಗುತ್ತವೆ. ಬರಹಗಳು ಮತ್ತು ಭಾಷಣಗಳು ಸಂಪುಟ 3ರ "ಬ್ರಾಹ್ಮಣ ಧರ್ಮದ ದಿಗ್ವಿಜಯ : ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು" ಎಂಬ 11ನೇ ಅಧ್ಯಾಯದಲ್ಲಿ ಡಾ. ಅಂಬೇಡ್ಕರ್ ಭಾರತ ಇತಿಹಾಸ ಎಂದರೇನು? ಅದನ್ನು ಯಾವ ಹಿನ್ನೆಲೆ ಮತ್ತು ದೃಷ್ಟಿಕೋನದಲ್ಲಿ ಗಮನಿಸಬೇಕೆಂಬುದರ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ – "ಭಾರತ ಇತಿಹಾಸದ ಕೆಲವು ಮೂಲಭೂತ ಸತ್ಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಬಯಸುತ್ತೇನೆ. ಭಾರತವು ಸಮರನಿರತ ಧರ್ಮಗಳ ನಾಡು. ಭಾರತದ ಚರಿತ್ರೆಯಲ್ಲಿ ಧರ್ಮ ವಹಿಸಿದಂಥ ಮಹತ್ತರ ಪಾತ್ರವನ್ನು ಇನ್ನಾವ ದೇಶದ ಧರವೂ ವಹಿಸಿಲ್ಲ. ಭಾರತದ ಚರಿತ್ರೆ ಎಂದರೆ ಬೌದ್ಧ ಧಮ್ಮ ಹಾಗೂ ಬ್ರಾಹ್ಮಣಧರ್ಮ್ಮಗಳ ನಡುವೆ ನಡೆದ ಮಾರಕವಾದ ಕಾಳಗದ ಚರಿತ್ರೆಯೇ ಆಗಿದೆ. ಈ ಸತ್ಯವನ್ನು ಎಷ್ಟು ನಿರ್ಲಕ್ಷಿಸಲಾಗಿದೆ ಎಂದರೆ ಯಾರೂ ಇದನ್ನು ತಕ್ಷಣ ಒಪ್ಪಲು ಸಿದ್ಧರಾಗುವುದಿಲ್ಲ. ಅಷ್ಟೇ ಏಕೆ, ಇಂಥಹ ಸೂಚನೆಯನ್ನು ಅಲ್ಲಗಳೆಯುವವರಿಗೇನೂ ಬರವಿರಲಾರದು. ಭಾರತದ ಚರಿತ್ರೆಯನ್ನು ಅರ್ಥಮಾಡಿಕೊಳ್ಳಬೇಕೆನ್ನುವವರೆಲ್ಲರೂ ಇದು ಬ್ರಾಹ್ಮಣ ಧರ ಹಾಗೂ ಬೌದ್ಧಧರಗಳ ನಡುವೆ ಹಿರಿಮೆಗಾಗಿ ನಡೆದ ಸಂಘರ್ಷದ ಚರಿತ್ರೆ ಎಂಬುದನ್ನು ತಿಳಿಯಬೇಕಿದೆ"5 ಎಂಬುದಾಗಿ ಅಂಬೇಡ್ಕರ್ ವಿಭಿನ್ನ ದೃಷ್ಟಿಕೋನವನ್ನು ನೀಡುತ್ತಾರೆ. ಭಾರತಕ್ಕೆ ಆರ್ಯರ ಆಗಮನಾನಂತರ, ಭಾರತೀಯ ಮೂಲನಿವಾಸಿ ದ್ರಾವಿಡರಿಗೂ ಆರ್ಯರಿಗೂ ಜನಾಂಗೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಂಘರ್ಷಗಳು ಆರಂಭವಾಯಿತು. ಅದರ ಮುಂದುವರಿಕೆಯೇ ಆರ್ಯರ ವೈದಿಕ ಅಥವಾ ಬ್ರಾಹ್ಮಣ ಧರಕ್ಕೂ ಹಾಗೂ ಮೂಲನಿವಾಸಿಗಳ ಧರವಾದ ಬೌದ್ಧಧರಕ್ಕೂ ತಮ್ಮ ತಮ್ಮ ಅಸ್ತಿತ್ವಗಳಿಗಾಗಿ ಈ ಸಂಘರ್ಷ ನಡೆಯುತ್ತದೆ. ಇದಕ್ಕೆ ಡಾ. ಅಂಬೇಡ್ಕರ್ ಹಲವು ಪುರಾವೆಗಳನ್ನು ಒದಗಿಸುತ್ತಾ ಸಾಬೀತು ಪಡಿಸುತ್ತಾರೆ.

ಭಾರತದ ಚರಿತ್ರೆ ಯಾರಿಂದ ಆರಂಭವಾಗುತ್ತದೆ. ಭಾರತದ ಮೂಲನಿವಾಸಿ ಜನಸಮುದಾಯಗಳಾವುವು ಎಂಬುದರ ಬಗ್ಗೆ ಭಾರತೀಯ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯ, ವಾದವಿವಾದಗಳಿವೆ. ಹಲವು ವಿದ್ವಾಂಸರು ಆರ್ಯರಿಂದ ಭಾರತದಲ್ಲಿ ನಾಗರಿಕತೆ ಆರಂಭವಾಯಿತು, ಇವರು ಭಾರತೀಯ ಮೂಲನಿವಾಸಿಗಳೇ ಎಂಬ ವಾದಗಳನ್ನು ಮಂಡಿಸುತ್ತಾರೆ. ಸಿಂಧೂ ಬಯಲಿನ ನಾಗರಿಕತೆ ನಿರ್ಮಾತೃಗಳು ಸಹ ಇವರೇ ಎಂಬ ಅಭಿಪ್ರಾಯ ಕೂಡ ಇದೆ. ಇಂತಹ ಭಿನ್ನಾಭಿಪ್ರಾಯಗಳನ್ನು ಗೊಂದಲಮಯ ವಾದಗಳನ್ನು ನಿವಾರಿಸುವ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ಹಲವು ಮಹತ್ವದ ಸತ್ಯವಿಚಾರಗಳನ್ನು ಮಂಡಿಸುತ್ತಾರೆ. "ಭಾರತದ ಮೇಲೆ ಧಾಳಿಮಾಡಿ, ಇದನ್ನೇ ತಮ್ಮ ಮನೆಯಾಗಿಸಿಕೊಂಡು, ತಮ್ಮ ಸಂಸ್ಕೃತಿಯನ್ನು ಸ್ಥಾಪಿಸಿದ ಆರ್ಯರೊಂದಿಗೆ ಭಾರತದ ಚರಿತ್ರೆ ಆರಂಭವಾಗುತ್ತದೆ ಎನ್ನುತ್ತಾರೆ. ಆರ್ಯರು ಅನಾರ್ಯರಿಗಿಂತ ಮೇಲ್ಮಟ್ಟದವರೆಂದು ಎಷ್ಟೇ ಹೇಳಿಕೊಂಡರೂ, ಭಾರತದ ಚರಿತ್ರೆಗೆ ಅವರು ಬಿಟ್ಟುಹೋದ ರಾಜಕೀಯ ಸಾಧನೆ ತೀರಾ ಕಮ್ಮಿ. ಆರ್ಯರು ಜಯಿಸಲಾಗದೆ, ಶಾಂತಿ ಬಯಸಬೇಕಾದಂಥ – ಆರ್ಯರು ತಮ್ಮ ಸಮಾನರೆಂದೇ ಪರಿಗಣಿಸಬೇಕಾಗಿ ಬಂದ – ನಾಗ ಎಂಬ ಬಲಿಷ್ಠ ಅನಾರ್ಯ ಜನಾಂಗದ ಉತ್ಕರ್ಷದೊಡನೆ ಭಾರತದ ರಾಜಕೀಯ ಚರಿತ್ರೆ ಆರಂಭವಾಗುತ್ತದೆ. ಪುರಾತನ ಕಾಲದಲ್ಲಿ ಭಾರತವು ರಾಜಕೀಯ ಕ್ಷೇತ್ರದಲ್ಲಿ ಸಾಧಿಸಿದ ಎಲ್ಲಾ ಖ್ಯಾತಿ ಮತ್ತು ವೈಭವದ ಪೂರ್ಣ ಶ್ರೇಯಸ್ಸು ಈ ಅನಾರ್ಯ ನಾಗರಿಗೇ ಸಲ್ಲಬೇಕು. ಜಗತ್ತಿನ ಇತಿಹಾಸದಲ್ಲಿ ಭಾರತವನ್ನು ಮಹೋನ್ನತ ಹಾಗೂ ಭವ್ಯವಾಗಿ ಮಾಡಿದ್ದು ಈ ಜನಾಂಗವೇ"6 ಎಂಬುದು ಡಾ. ಅಂಬೇಡ್ಕರವರ ಅಭಿಪ್ರಾಯ. ಅಂದರೆ ಅನಾರ್ಯರಾದ "ನಾಗ" ಎಂಬ ಜನ ಸಮುದಾಯ ಆರ್ಯರಿಗಿಂತ ಮುಂಚೆ ಭಾರತದಲ್ಲಿ ಸಮಾಜ, ಸಂಸ್ಕೃತಿ, ನಾಗರಿಕತೆ, ಇತಿಹಾಸವನ್ನು ಆರಂಭಿಸಿತು. ಸಿಂಧೂ ಬಯಲಿನ ನಾಗರಿಕತೆಯನ್ನೊಳಗೊಂಡು, ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯನ್ನು ಮಾಡಿದವರು ಇದೇ ನಾಗರು ಎಂಬುದನ್ನು ಸಹ ಡಾ. ಅಂಬೇಡ್ಕರ್ ಹೇಳುತ್ತಾರೆ.

"ಕ್ರಿ.ಪೂ. 642ರಲ್ಲಿ ಬಿಹಾರದಲ್ಲಿ ಉದಯಿಸಿದ ಮಗಧ ಸಾಮ್ರಾಜ್ಯವೇ ಭಾರತದ ರಾಜಕೀಯ ಇತಿಹಾಸದ ಮೊದಲ ಮೈಲಿಗಲ್ಲು. ಈ ಮಗಧ ಸಾಮ್ರಾಜ್ಯ ಸ್ಥಾಪಿಸಿದವನು – ಅನಾರ್ಯ ನಾಗ ಜನಾಂಗಕ್ಕೆ ಸೇರಿದ ಶಿಸುನಾಗ. ಈ ವಂಶದ 5ನೇ ದೊರೆ ಬಿಂಬಸಾರನ ಕಾಲದಲ್ಲಿ ಇದು ಮಹಾಸಾಮ್ರಾಜ್ಯವಾಗಿ ಬೆಳೆಯಿತು. ಶಿಸುನಾಗ ವಂಶವು ಕ್ರಿ.ಪೂ. 413ರವರೆಗೆ ಸಾಮ್ರಾಜ್ಯ ಆಳಿತು. 413ರಲ್ಲಿ ಶಿಸುನಾಗ ವಂಶದ ಕೊನೆಯ ರಾಜ ಮಹಾನಂದನನ್ನು ಕೊಂದು ಮಗಧ ಸಿಂಹಾಸನವನ್ನು ಆಕ್ರಮಿಸಿ ನಂದ ನೆಂಬುವವನು ನಂದರ ಆಳ್ವಿಕೆ ಸ್ಥಾಪಿಸಿದನು. ಈ ನಂದ ವಂಶ ಮಗಧ ಸಾಮ್ರಾಜ್ಯವನ್ನು ಕ್ರಿ.ಪೂ. 322ರವರೆಗೆ ಆಳಿತು. ನಂದ ವಂಶದ ಕೊನೆಯ ದೊರೆಯನ್ನು ಚಂದ್ರಗುಪ್ತ ಮೌರ್ಯನು ಸೋಲಿಸಿ "ಮೌರ್ಯ" ಆಳ್ವಿಕೆಯನ್ನು ಸ್ಥಾಪಿಸಿದನು. ಈ ಚಂದ್ರಗುಪ್ತ ಶಿಸುನಾಗ ವಂಶದ ಕೊನೆಯ ದೊರೆಯ ಸಂಬಂಧಿಯಾಗಿದ್ದರಿಂದ, ಚಂದ್ರಗುಪ್ತನ ಕ್ರಾಂತಿ, ನಾಗ ಆಳ್ವಿಕೆಯ ಮರುಸ್ಥಾಪನೆ ಎಂದೇ ಹೇಳಬಹುದು. ಅಶೋಕನ ಆಳ್ವಿಕೆಯಲ್ಲಿ ಈ ಸಾಮ್ರಾಜ್ಯ ಎಷ್ಟು ವಿಶಾಲವಾಯಿತೆಂದರೆ ಇದಕ್ಕೆ ಮೌರ್ಯ ಸಾಮ್ರಾಜ್ಯ ಅಥವಾ ಅಶೋಕ ಸಾಮ್ರಾಜ್ಯವೆಂದೇ ಹೆಸರಾಯಿತು."7

ಆರ್ಯರ ಆಗಮನ ಪೂರ್ವದಲ್ಲಿದ್ದ ಜನಸಮುದಾಯಗಳು ಭಾರತದ ಮೂಲನಿವಾಸಿಗಳಾಗಿದ್ದು, ಅವರಿಂದಲೇ ಇಲ್ಲಿಯ ಸಾಂಸ್ಕೃತಿಕ ಮತ್ತು ರಾಜಕೀಯ ಚರಿತ್ರೆ ಆರಂಭವಾಗಿದೆ. ಈ ಆರ್ಯರ ಪೂರ್ವ ಜನಸಮುದಾಯಗಳಲ್ಲಿ 'ನಾಗ' ಜನಸಮುದಾಯ ಪ್ರಧಾನವಾದುದು. ಯಾರನ್ನು "ದ್ರಾವಿಡ' ಎಂದು ಗುರುತಿಸುತ್ತೇವೋ ಅವರೇ ಈ ನಾಗರು ಎಂಬುದನ್ನು ಡಾ. ಅಂಬೇಡ್ಕರ್ ಚಾರಿತ್ರಿಕ ಆಧಾರಗಳನ್ನು ಬಳಸಿ ಸ್ಪಷ್ಟಪಡಿಸುತ್ತಾರೆ.

ಬರಹಗಳು ಮತ್ತು ಭಾಷಣಗಳು ಸಂಪುಟ 7ರ "ಅಸ್ಪೃಶ್ಯರು ಯಾರು; ಅವರೇಕೆ ಅಸ್ಪೃಶ್ಯರಾದರು" ಎಂಬ ಭಾಗದಲ್ಲಿ ಪ್ರಾಚೀನ ಭಾರತದ ಜನಾಂಗಗಳ ಬಗ್ಗೆ ಚರ್ಚಿಸುತ್ತಾರೆ. ಭಾರತದಲ್ಲಿ ಸಿಂಧೂ ನಾಗರಿಕತೆಯನ್ನು, ಪ್ರಥಮ ಮಗಧ ಸಾಮ್ರಾಜ್ಯವನ್ನು ಕಟ್ಟಿದ ಅನಾರ್ಯ 'ನಾಗ' ಜನರೇ ದ್ರಾವಿಡರು, ದ್ರಾವಿಡ ಎಂಬುದು ನಾಗಜನರ ಭಾಷಾಸೂಚಕ ಪದ

ಎಂಬುದನ್ನು ಸ್ಪಷ್ಟಪಡಿಸುತ್ತಾರೆ. "ಪ್ರಾಚೀನ ಭಾರತದ ಇತಿಹಾಸದ ಅಧ್ಯಯನ ಮಾಡುವವರು ಪ್ರಾಚೀನ ಭಾರತದಲ್ಲಿ ಆರ್ಯ, ದ್ರಾವಿಡ, ದಾಸ ಮತ್ತು ನಾಗ ಎಂಬ ನಾಲ್ಕು ಜನಾಂಗಗಳು ಇದ್ದವೆಂಬುದನ್ನು ಗಮನಿಸಬಹುದು. ಆದರೆ ಈ ಆರ್ಯ, ದ್ರಾವಿಡ, ದಾಸ ಮತ್ತು ನಾಗ ಎಂಬ ಹೆಸರುಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಯಾರೂ ಪರಿಶೀಲಿಸಿಲ್ಲ. ಈ ಹೆಸರುಗಳು ವಿಭಿನ್ನ ಜನಾಂಗಗಳನ್ನು ಹೆಸರಿಸು ತ್ತವೆಯೇ ಅಥವಾ ಒಂದೇ ಜನಾಂಗದ ಜನತೆಗೆ ನೀಡಲಾದ ಭಿನ್ನ ಹೆಸರುಗಳೇ? ಹಲವು ಇತಿಹಾಸಕಾರರು ಇವೆಲ್ಲ ಪ್ರತ್ಯೇಕ ಜನಾಂಗಗಳು ಎಂದು ಹೇಳಿ ತಪ್ಪು ಮಾಡಿದ್ದಾರೆ'8

ಡಾ. ಅಂಬೇಡ್ಕರ್ ಸ್ಪಷ್ಟಪಡಿಸುವ ಪ್ರಕಾರ ಆರ್ಯರು ಒಂದು ಜನಾಂಗವಲ್ಲ, ಒಂದು ಸಂಸ್ಕೃತಿಗೆ ಬದ್ಧರಾಗಿದ್ದವರು. ಮಧ್ಯ ಏಷ್ಯಾದಿಂದ ಬಂದವರು ಎಂಬುದನ್ನು ಹೇಳದಿದ್ದರೂ ಅವರು ಮೂಲಭಾರತೀಯರಲ್ಲ ಎಂಬುದು ಅವರ ಬರಹಗಳಲ್ಲಿ ವ್ಯಕ್ತವಾಗುತ್ತದೆ. ಇವರಲ್ಲಿ ಋಗ್ವೇದಿ ಆರ್ಯರು, ಅಥರ್ವವೇದಿ ಆರ್ಯರೆಂದು ಎರಡು ಗುಂಪುಗಳಿದ್ದವು. ಇವರು ಭಾರತಕ್ಕೆ ವಲಸೆ ಬಂದ ಪ್ರಾಚೀನ, ವಿಭಿನ್ನ ಜನಸಮುದಾಯ. "ದಾಸ" ಮತ್ತು "ನಾಗ" ಬೇರೆ ಬೇರೆಯಲ್ಲ. ವಾಸ ಎಂಬುದು ನಾಗ ಜನತೆಯ ಮತ್ತೊಂದು ಹೆಸರು ಎಂಬುದನ್ನು ಡಾ. ಅಂಬೇಡ್ಕರ್ ಸ್ಪಷ್ಟಪಡಿಸುತ್ತಾರೆ. "ದಾಸರೇ ಹೇಗೆ ನಾಗ ಎಂದು ಕರೆಯಲ್ಪಡಲಾರಂಭಿಸಿದರು. ಎಂಬುದನ್ನು ವೈದಿಕ ಸಾಹಿತ್ಯದಿಂದ ತಿಳಿಯುವುದು ಕಷ್ಟವಲ್ಲ, ಇಂಡೋಇರಾನಿ ಪದ "ದಹಕ' ಸಂಸ್ಕೃತ ರೂಪವೇ ದಾಸ. ದಹಕ ಎಂಬುದು ನಾಗ ಅರಸನೊಬ್ಬನ ಹೆಸರು. ಪರಿಣಾಮವಾಗಿ ಆರ್ಯರು ನಾಗರನ್ನು ಅವರ ಅರಸನ ದಕಹ/ದಾಸ ಹೆಸರಿನಿಂದ ಕರೆಯಲಾರಂಭಿಸಿದರು.'9

"ನಾಗ ಜನತೆ ಯಾರು? ನಿಸ್ಸಂದೇಹವಾಗಿಯೂ ಅವರು ಅನಾರ್ಯರು. ಅತ್ಯಂತ ಉನ್ನತ ಸಾಂಸ್ಕೃತಿಕ ಸ್ಥಾನವನ್ನು ಗಳಿಸಿದ್ದರಷ್ಟೇ ಅಲ್ಲ, ಭಾರತದ ಬಹುಭಾಗವನ್ನು ಅವರು ಆಳುತ್ತಿದ್ದರೆಂದೂ ಇತಿಹಾಸ ಹೇಳಿದೆ. ಮಹಾರಾಷ್ಟ್ರವು ನಾಗ ಜನಾಂಗದ ನೆಲೆ ಎಂಬ ಬಗೆಗೆ ಹೇಳಲೇಬೇಕಾಗಿಲ್ಲ. ಮಹಾರಾಷ್ಟ್ರ ಪ್ರದೇಶದ ಜನ ಮತ್ತು ರಾಜರು ನಾಗರೇ ಆಗಿದ್ದರು.'10 "ದ್ರಾವಿಡರು ಮತ್ತು ನಾಗ ಎಂಬುದು ಕೇವಲ ಒಂದೇ ಜನಾಂಗದ ಭಿನ್ನ ಹೆಸರುಗಳು ಎಂಬುದನ್ನು ಒಪ್ಪಲು ಸಿದ್ಧವಿರುವವರು ಕೆಲವರೇ ಇರಬಹುದು. ಅದರಲ್ಲೂ ದ್ರಾವಿಡರೂ ನಾಗ ಎಂಬ ಹೆಸರಲ್ಲಿ ದಕ್ಷಿಣ ಭಾರತದಲ್ಲಷ್ಟೇ ಅಲ್ಲ, ಭಾರತದ ಉತ್ತರ ಹಾಗೂ ಇಡೀ ಭಾರತಕ್ಕೆ ಹರಡಿದ್ದರು ಎಂಬುದನ್ನು ಒಪ್ಪುವವರು ಹೆಚ್ಚು ಮಂದಿ ಇರಲಾರರು. ಆದರೂ ಕೂಡ ಇದು ಐತಿಹಾಸಿಕ ಸತ್ಯ'11 ಎಂಬುದಕ್ಕೆ ಡಾ. ಅಂಬೇಡ್ಕರ್ ಹಲವು ಸಾಕ್ಷ್ಯಾಧಾರಗಳನ್ನು ಒದಗಿಸುತ್ತಾರೆ. "ದ್ರಾವಿಡ ಪದವು 'ತಮಿಳು' ಪದದ ಸಂಸ್ಕೃತ ರೂಪ. ತಮಿಳು ಮೂಲಪದವು ಸಂಸ್ಕೃತಕ್ಕೆ ಸೇರಿದಾಗ ಅದು 'ದಮಿಳ' ಆಗಿ ಮುಂದೆ 'ದಮಿಳ್ಳ'ವೇ ದ್ರಾವಿಡವಾಯಿತು. ದ್ರಾವಿಡ ಪದವು ಭಾಷಾ ಸೂಚಕವಾಗಿದೆಯಲ್ಲದೆ ಜನಾಂಗ ಸೂಚಕವಾಗಿಲ್ಲ. ನಾವು ನೆನಪಿನಲ್ಲಿಡ ಬೇಕಾದ ಅಂಶವೆಂದರೆ, ತಮಿಳು ಅಥವಾ ದ್ರಾವಿಡ ದಕ್ಷಿಣ ಭಾರತದ ಭಾಷೆಯಷ್ಟೇ ಅಲ್ಲ. ಆರ್ಯ ಪೂರ್ವದಲ್ಲಿ ಅದು ಇಡೀ ಭಾರತದ ಭಾಷೆಯಾಗಿತ್ತು ಹಾಗೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಜನರು ಅದನ್ನೇ ಮಾತನಾಡುತ್ತಿದ್ದರು. ವಾಸ್ತವವಾಗಿ, ಭಾರತದಾದ್ಯಂತ ಅದು ನಾಗಗಳ ಭಾಷೆ"12 ಎಂಬ ಹಲವು ಮಹತ್ವದ ವಿಚಾರಗಳನ್ನು ಡಾ. ಅಂಬೇಡ್ಕರ್ ಪ್ರಸ್ತಾಪಿಸುವ ಮೂಲಕ ಭಾರತದ ಚರಿತ್ರೆಯ ಮೇಲೆ ಹೊಸಬೆಳಕು ಚೆಲ್ಲಿದ್ದಾರೆ. ಅಂತಿಮವಾಗಿ ಭಾರತದಲ್ಲಿ ಪ್ರಾಚೀನವಾಗಿ ಇದ್ದವರು ಎರಡು ಜನಾಂಗಗಳು. ಅನಾರ್ಯರಾದ 1. ನಾಗರು, 2. ವಲಸಿಗರಾದ ಆರ್ಯರು. ಯಾವ ಸಿಂಧೂ ಬಯಲಿನ ನಾಗರಿಕತೆಯ ನಿರ್ಮಾಪಕರನ್ನು 'ದ್ರಾವಿಡರು'ಎನ್ನುತ್ತೇವೋ ಅವರ ಜನಾಂಗೀಯ ಹೆಸರು "ನಾಗ" ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. "ಅಸುರ ಎಂಬುದು ದೈತ್ಯರು, ದಾನವರು, ದಸ್ಯುಗಳು, ಕಾಲಾಂಜರು, ಕಾಲಕೇಯರು, ಕಾಲಿಯರು, ನಾಗಗಳು, ನಿವಾತಕ ಏಚರು, ಪೌಲೋಮರು, ಪಿಶಾಚರು ಮತ್ತು ರಾಕ್ಷಸರು ಮುಂತಾದ ಬುಡಕಟ್ಟುಗಳಿಗೆ ದತ್ತವಾಗಿದ್ದ ಸಾಮಾನ್ಯ ಹೆಸರು. ""3 ಎಂಬುದಾಗಿ ಡಾ. ಅಂಬೇಡ್ಕರ್ ಸಂಪುಟ 3 ರ "ಶೂದ್ರರು ಮತ್ತು ಪ್ರತಿಕ್ರಾಂತಿ" ಎಂಬ ಅಧ್ಯಾಯದಲ್ಲಿ ಉಲ್ಲೇಖಿಸುತ್ತಾರೆ.

ಈ ಹಿನ್ನೆಲೆಯ ನಾಗ, ಅಸುರ ಜನಸಮುದಾಯಗಳು ನಿಸ್ಸಂದೇಹವಾಗಿ ಭಾರತದ ಸಿಂಧೂಬಯಲಿನ ನಾಗರಿಕತೆಯನ್ನು ಕಟ್ಟಿದವರು ಹಾಗೂ ನಾಗರಿಕತೆ ಪೂರ್ವಯುಗಗಳಿಂದ ಭಾರತದಲ್ಲಿ ವಾಸಿಸುತ್ತಾ ಬಂದ ಮೂಲನಿವಾಸಿಗಳು ಎಂಬುದನ್ನು ನಮ್ಮ ಇತಿಹಾಸಕಾರರು ಸಂಶೋಧಿಸುವ, ಒಪ್ಪಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಈ ಮೂಲನಿವಾಸಿ ಸುಸಂಸ್ಕೃತ, ನಾಗರಿಕ ನಾಗರನ್ನು, ಅಸುರ ಬುಡಕಟ್ಟುಗಳನ್ನು ಸೋಲಿಸಿದ ಆರ್ಯರು ತಮ್ಮ ವೇದಗಳಲ್ಲಿ, ಕಾವ್ಯಗಳಲ್ಲಿ, ಪುರಾಣಗಳಲ್ಲಿ, ಇವರನ್ನು ಮಾನವೇತರ, ಕ್ರೂರ, ಕಾಲ್ಪನಿಕ ಎಂಬಂತೆ ವಿಕೃತವಾಗಿ ಚಿತ್ರಿಸಿದರು. ಹಾಗಾಗಿ ಬಲಿಚಕ್ರವರ್ತಿ, ರಾವಣಮಹಾರಾಜ ಮೊದಲಾದವರು ಚರಿತ್ರೆಯನ್ನು ಕಳೆದುಕೊಂಡರು. ಮೈಸೂರ ದೊರೆ ಮಹಿಷಾಸುರ ವಿಕೃತಗೊಂಡ. ಮಹಿಷನ ಆಳ್ವಿಕೆಗೊಳಗಾಗಿ ಆತನಿಂದಲೇ ಮೈಸೂರು ಎಂಬ ಹೆಸರು ಪಡೆದ ಮಹಿಷಮಂಡಲ ಎಂಬ ಮೈಸೂರಿನಲ್ಲಿ ಅವನ ವಿರುದ್ಧ ಚಾಮುಂಡಿಯು ಗಳಿಸಿದ ವಿಜಯೋತ್ಸವವು ದಸರೋತ್ಸವವಾಗುವಂತಾಯಿತು. ಸಿಂಧೂ ನಾಗರಿಕತೆಯ ನಾಗ, ಅಸುರ ಬುಡಕಟ್ಟುಗಳ ಜೊತೆ ತಮ್ಮ ಇರುವಿಕೆಗಾಗಿ ಹೋರಾಡಲು ನಿಲ್ಲುವ ಮಧ್ಯ ಏಷ್ಯಾದ ಆರ್ಯರ ಹೋರಾಟ ಮೊದಲಿಗೆ ಜನಾಂಗೀಯ ಹೋರಾಟವಾಗಿತ್ತು. ಮುಂದುವರೆದು ಮೌಲ್ಯಗಳ, ಸಂಸ್ಕೃತಿಯ, ಧಮ್ಮಗಳ ಹೋರಾಟವಾಯಿತು. "ಅಶೋಕ ಬೌದ್ಧ ದರವನ್ನು ರಾಜ್ಯಧರವಾಗಿ ಮಾಡಿದ. ಇದರಿಂದ
ಬ್ರಾಹ್ಮಣಧರಕ್ಕೆ ಬಹುದೊಡ್ಡ ಪೆಟ್ಟಾಯಿತು. ಬ್ರಾಹ್ಮಣಧರದ ಜೀವಾಳವಾಗಿದ್ದ ಎಲ್ಲ ಬಗೆಯ ಪ್ರಾಣಿ ಬಲಿ, ಯಾಗ ಯಜ್ಞಗಳನ್ನು ಅಶೋಕ ನಿಷೇಧಿಸಿದ ಸರಳಕಾರಣಕ್ಕೆ ಬ್ರಾಹ್ಮಣಧರ ದಮನಗೊಂಡಿತು. ಬ್ರಾಹ್ಮಣರು ರಾಜಾಶ್ರಯ ಕಳೆದುಕೊಂಡಿದ್ದಷ್ಟೇ ಅಲ್ಲ, ಯಜ್ಞಗಳನ್ನು ಮಾಡಿ ಜೀವನ ಸಾಗಿಸಲು ದಕ್ಷಿಣೆಯನ್ನು ಪಡೆಯುತ್ತಿದ್ದ ಅವಕಾಶವನ್ನು ಕಳೆದುಕೊಂಡರು. ಬ್ರಾಹ್ಮಣರು ಮೌರ್ಯ ಸಾಮ್ರಾಜ್ಯವಿದ್ದ 140 ವರ್ಷಗಳ ಕಾಲ ದಮನಿತ ವರ್ಗವಾಗಿ ಜೀವಿಸಿದರು.

ಆದ್ದರಿಂದ ಬ್ರಾಹ್ಮಣರಿಗೆ ಬೌದ್ಧರಾಜ್ಯದ ವಿರುದ್ಧ ಬಂಡೇಳುವುದೊಂದೇ ಮಾರ್ಗವಾಗಿತ್ತು. ಮೌರ್ಯರ ಆಳ್ವಿಕೆ ವಿರುದ್ಧ ಪುಷ್ಯಮಿತ್ರನೇಕೆ ದಂಗೆಯ ಧ್ವಜ ಎತ್ತಿದನೆಂಬುದಕ್ಕೆ ವಿಶೇಷ ಕಾರಣವಿದೆ.

ರಾಜ್ಯಧರವಾಗಿದ್ದ ಬೌದ್ಧಧರವನ್ನು ನಾಶಮಾಡುವುದು ಮತ್ತು ಬ್ರಾಹ್ಮಣರನ್ನೆ ಭಾರತದ ಸಾರ್ವಭೌಮ ದೊರೆಗಳನ್ನಾಗಿ ಮಾಡಿ, ಆ ಮೂಲಕ ರಾಜಕೀಯ ಅಧಿಕಾರ ಬಳಸಿ ಬೌದ್ಧಧಮ್ಮದ ವಿರುದ್ಧ ಬ್ರಾಹ್ಮಣಧಮ್ಮದ ವಿಜಯ ಸಾಧಿಸುವುದೇ ಪುಷ್ಯಮಿತ್ರನ ರಾಜಹತ್ಯೆಯ ಉದ್ದೇಶವಾಗಿತ್ತೆಂದು"14 ಡಾ. ಅಂಬೇಡ್ಕರ್ ಬರೆಯುತ್ತಾರೆ. ಈ ಘಟನೆಗಳು ಭಾರತದ ಚರಿತ್ರೆಯಲ್ಲಿ ಮಹತ್ವದ ಘಟನೆಗಳಾಗಿವೆ. ಪುಷ್ಯಮಿತ್ರನು ಮೌರ್ಯರ ಕೊನೆಯ ಚಕ್ರವರ್ತಿ ಬೃಹದತ್ತ ಮೌರ್ಯನನ್ನು ಕೊಂದು ರಾಜ್ಯಾಧಿಕಾರವನ್ನು ಆಕ್ರಮಿಸುವ ಮೂಲಕ ನಾಗ, ಅಸುರ ಬುಡಕಟ್ಟು ಮೂಲನಿವಾಸಿ ಜನಸಮುದಾಯಗಳ ಸಂಸ್ಕೃತಿ ಮತ್ತು ಚರಿತ್ರೆಯನ್ನು ನಾಶಮಾಡುತ್ತಾನೆ. ಮನುಸ್ಮೃತಿಯನ್ನು ಜಾರಿಗೆ ತರುತ್ತಾನೆ. ಇದನ್ನೇ ಡಾ. ಅಂಬೇಡ್ಕರ್ "ಬ್ರಾಹ್ಮಣ ಧಮ್ಮದ ದಿಗ್ವಿಜಯ, ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು" ಎಂಬುದಾಗಿ ಕರೆಯುತ್ತಾರೆ. 1932ರಲ್ಲಿ ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯರಿಗೆ ಬ್ರಿಟಿಷರು ನೀಡಿದ್ದ ಪ್ರತ್ಯೇಕ ಪ್ರಾತಿನಿಧ್ಯವನ್ನು ವಿರೋಧಿಸಿ ಉಪವಾಸ ಮಾಡಿ, ಡಾ. ಅಂಬೇಡ್ಕರ್ ಆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೈಬಿಡುವಂತೆ ಮಾಡುವ ಶ್ರೀಮಾನ್ ಗಾಂಧೀಜಿಯವರ ಆ ಗೆಲುವು ಕೂಡ ಪುಷ್ಯಮಿತ್ರನು ಮಾಡಿದ ರಾಜಹತ್ಯೆಗೆ ಸಮ ಹಾಗೂ ಬ್ರಾಹ್ಮಣಧಮ್ಮದ ದಿಗ್ವಿಜಯವೂ ಆಗಿದೆ. ಅದೇ ರೀತಿ ಅಂದು ಆರಂಭವಾದ ಪ್ರತಿಕ್ರಾಂತಿಯು ಮುಂದುವರಿದು ಬಂದ ಸೂಚನೆಗಳೂ ಆಗಿವೆ. ಅದು ಅಷ್ಟಕ್ಕೆ ನಿಲ್ಲದೆ ಇಂದಿಗೂ "ಭಾರತ ಸಂವಿಧಾನ ಪರಾಮರ್ಷೆ" ಎಂಬ ಹೆಸರಲ್ಲಿ ಮತ್ತೆ ಪ್ರಜಾಪ್ರಭುತ್ವದ ಹತ್ಯೆ ಮಾಡಿ, ಮನುಸ್ಮೃತಿ ಜಾರಿಗೊಳಿಸಲು ಬ್ರಾಹ್ಮಣಪಾಹಿ, ಮನುವಾದಿಗಳು ತವಕಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತದ ಚರಿತ್ರೆಯನ್ನು ನೋಡಬೇಕು, ವ್ಯಾಖ್ಯಾನಿಸಬೇಕೆಂದು ಡಾ. ಅಂಬೇಡ್ಕರ್ ನಿಲುವು.

ಡಾ. ಅಂಬೇಡ್ಕರ್ ಒಬ್ಬ ಪ್ರಾಮಾಣಿಕ, ಸತ್ಯಶೋಧನಾ ಇತಿಹಾಸಕಾರರಾಗಿ ಪ್ರಾಚೀನ ಭಾರತದ ಚರಿತ್ರೆಯನ್ನು ಪುನರ್ ರಚಿಸುವಂತೆ ನಾವು ಯಾವುದೇ ಇತಿಹಾಸದ ಪಠ್ಯ ಪುಸ್ತಕಗಳಲ್ಲಿ ಓದಲಾಗಿಲ್ಲದ ವಿಭಿನ್ನ ರೀತಿಯ ಘಟನೆಗಳು ಬುದ್ಧನ ಸನ್ಯಾಸತ್ವಕ್ಕೆ ಕಾರಣವಾಗಿವೆ ಎಂಬುದನ್ನು ಕುರಿತು ಬರೆದಿದ್ದಾರೆ. "ಬುದ್ಧ ಮತ್ತು ಆತನ ಧಮ್ಮ" ಡಾ. ಅಂಬೇಡ್ಕರ್ ಬರೆದ ಕಡೆಯ ಹಾಗೂ ಮಹತ್ವಕೃತಿ. ಈ ಕೃತಿಯಲ್ಲಿ ಗೌತಮನು ಸನ್ಯಾಸಿಯಾಗಲು ವಾಸ್ತವವಾಗಿ ಏನುಕಾರಣ ಎಂಬುದರ ಬಗ್ಗೆ ಬರೆಯುತ್ತಾರೆ. ಚರಿತ್ರೆಯಲ್ಲಿ ನಾವೆಲ್ಲರೂ ಓದಿರುವಂತೆ ಬುದ್ಧ ತಾನು ಸಂಸಾರ, ಸಾಮ್ರಾಜ್ಯ ಎಲ್ಲವನ್ನೂ ತೊರೆಯಲು ನಾಲ್ಕು ಮುಖ್ಯ ಘಟನೆಗಳು ಕಾರಣ. ಒಂದು ಆತನು ನೋಡಿದ ಒಬ್ಬ ರೋಗಿ, ಎರಡು ಮುದುಕ, ಮೂರು ಹೆಣದ ಸ್ಮಶಾನ ಯಾತ್ರೆ, ನಾಲ್ಕು ಒಬ್ಬ ಸನ್ಯಾಸಿ. ಗೌತಮ ಈ ಯಾವುದರ ಅರಿವು ಇಲ್ಲದಷ್ಟು ಸಮಾಜದಿಂದ ದೂರ ಇದ್ದ. ಒಮ್ಮೆ ಈ ಎಲ್ಲವನ್ನೂ ನೋಡಿ ಮನುಷ್ಯನ ದುಃಖದ ಮೂಲ ಹುಡುಕಲು ಸನ್ಯಾಸಿಯಾದ ಎಂಬುದನ್ನು ಪಠ್ಯ ಪುಸ್ತಕಗಳಲ್ಲಿ ಓದಿದ್ದೇವೆ. ಡಾ. ಅಂಬೇಡ್ಕರ್ ಒಬ್ಬ ಸತ್ಯಶೋಧನ ಇತಿಹಾಸಕಾರರಾಗಿ, ಸಂಶೋಧಕರಾಗಿ ಗೌತಮ ಸನ್ಯಾಸಿಯಾಗಲು ತತ್‌ಕ್ಷಣದ ಹಾಗೂ ಬಹು ಮುಖ್ಯವಾದ ಘಟನೆ ಯಾವುದು ಎಂಬುದನ್ನು ತಮ್ಮ ಗ್ರಂಥದಲ್ಲಿ ಬರೆಯುತ್ತಾರೆ. ಇದನ್ನು ಬಹುತೇಕ ಇತಿಹಾಸಕಾರರು ಉಲ್ಲೇಖಿಸುವುದೇ ಇಲ್ಲ. ಅವರ ಪ್ರಕಾರ ಈ ನಾಲ್ಕು ಘಟನೆಗಳು ಪರಿಣಾಮ ಬೀರಿರಬಹುದು. ಆದರೆ ಇವುಗಳ ಜೊತೆಗೆ ರೋಹಿಣೀ ನದಿ ನೀರಿನ ಸಮಸ್ಯೆ ಮುಖ್ಯವಾದುದು.

ಡಾ. ಅಬೇಡ್ಕರ್ ಪ್ರಕಾರ – ಶಾಕ್ಯರಲ್ಲಿ ಒಂದು ಸಂಘವಿತ್ತು. 20 ವರ್ಷ ತುಂಬಿದ ಶಾಕ್ಯಯುವಕರೆಲ್ಲ ಅದಕ್ಕೆ ಸದಸ್ಯರಾಗುವುದು ಕಡ್ಡಾಯವಿತ್ತು. ಅದರಂತೆ ಸಿದ್ದಾರ್ಥನು ಸದಸ್ಯನಾದ. ಆದ ಎಂಟನೇ ವರ್ಷದ ಸಂದರ್ಭದಲ್ಲಿ ಶಾಕ್ಯರಾಜ ಮತ್ತು ಪಕ್ಕದ ಕೊಲಿಯಾ ರಾಜ್ಯಗಳ ನಡುವೆ ಹಾಯುತ್ತಿದ್ದ ರೋಹಿಣಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಎರಡು ರಾಜ್ಯಗಳ ನಡುವೆ ಜಗಳ ಉಂಟಾಯಿತು. ಎರಡು ರಾಜ್ಯಗಳವರು ಯುದ್ಧಕ್ಕೆ ಮುಂದಾದರು. ವಿಷಯ ಶಾಕ್ಯಸಂಘದ ಮುಂದೆ ಬಂತು. ಸಂಘ ಕೊಲಿಯಾರ ವಿರುದ್ಧ ಯುದ್ಧ ಸಾರಲು ನಿರ್ಧರಿಸಿತು. ಸದಸ್ಯರಿಂದ ಆಕ್ಷೇಪಣೆ ಇದ್ದರೆ ಹೇಳಲು ತಿಳಿಸಿತು. ಗೌತಮ ಯುದ್ಧ ವಿರೋಧಿಸಿದ. ಯುದ್ಧ ಮತ್ತು ಹಿಂಸೆ ಯಾವುದಕ್ಕೂ ಪರಿಹಾರವಲ್ಲವೆಂದು ಪ್ರತಿಪಾದಿಸಿದ. ಸಂಘದ ತೀರ್ಪಿಗೆ ವಿರುದ್ಧವಾಗಿ ನಿಂತ ಗೌತಮನಿಗೆ ಸಂಘ ಶಿಕ್ಷೆ ವಿಧಿಸಿತು. ಮೂರು ವಿಧದ ಶಿಕ್ಷೆಗಳಲ್ಲಿ ಒಂದನ್ನು ಆಯ್ದುಕೊಳ್ಳಲು ಬಿಟ್ಟಿತು. ಒಂದು – ಸೈನ್ಯ ಸೇರಿ ಕೊಲಿಯಾರ ವಿರುದ್ಧ ಯುದ್ಧ ಮಾಡುವುದು. ಎರಡು – ಮರಣದಂಡನೆ ಅಥವಾ ರಾಜ್ಯದಿಂದ ಗಡಿಪಾರು ಮೂರು–ಗೌತಮನ ಕುಟುಂಬದವರ ಸಾಮಾಜಿಕ ಬಹಿಷ್ಕಾರ. ಗೌತಮ ಗಡೀಪಾರು ಶಿಕ್ಷೆಗೆ ಒಪ್ಪಿದ. ಕೋಸಲ ಸಾಮ್ರಾಟ ಶಾಕ್ಯರನ್ನು ಗಡಿಪಾರಿಗೆ ಕಾರಣ ಕೇಳಬಹುದೆಂದು ಅದನ್ನು ತಪ್ಪಿಸಲು ಸ್ವತಃ ಗೌತಮ ಪರಿವ್ರಜ ಸ್ವೀಕರಿಸಿ ರಾಜ್ಯ ತೊರೆಯುವ ಮೂಲಕ ಶಾಕ್ಯರಿಗೂ, ತಾನು ರಾಜ್ಯ ಸೃಜಿಸುವುದಕ್ಕೂ ಸಂಬಂಧವಿರದಂತೆ ನಡೆದುಕೊಂಡ. ಮನುಷ್ಯ ಮನುಷ್ಯರ ನಡುವೆ ದ್ವೇಷ ತೊಲಗಿಸಿ ಶಾಂತಿ, ಪ್ರೀತಿಯ ಸೇತುವೆ ಕಟ್ಟಲು ಸನ್ಯಾಸಿಯಾದ, ಬುದ್ಧನಾದ. ಮನುಕುಲಕ್ಕೆ ಬೆಳಕಾಗುವ ಬೌದ್ಧಧರ ಸ್ಥಾಪಿಸಿದ. ಗೌತಮ ಸಂನ್ಯಾಸಿಯಾಗಲು ಇದು ಒಂದು ಕಾರಣ ಎಂಬುದನ್ನು ಅಥವಾ ಈ ಘಟನೆ ಮುಖ್ಯವಾದುದೆಂದು ಯಾವ ಇತಿಹಾಸಕಾರನೂ ಒಪ್ಪಲಾರ, ಬರೆಯಲಾರ. ಇಂತಹ ಸಾವಿರಾರು ಕಟುಸತ್ಯಗಳನ್ನು ಚರಿತ್ರಕಾರರಾಗಿ ಡಾ. ಅಂಬೇಡ್ಕರ್ ದಾಖಲಿಸುತ್ತಾ ಹೋಗುತ್ತಾರೆ.

ಆಧುನಿಕ ಭಾರತದ ಇತಿಹಾಸದಲ್ಲಿ ದುಂಡುಮೇಜಿನ ಪರಿಷತ್ತು, ಪೂನಾ ಒಪ್ಪಂದ, ಮೀಸಲಾತಿ ಇತಿಹಾಸ ಇವು ಮಹತ್ವದ ವಿಷಯಗಳು. ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಅಸ್ಪೃಶ್ಯರ ಪರವಾಗಿ ಯಾವುದಕ್ಕೋಸ್ಕರ ಹೋರಾಡಿದರು. ಅದರ ಫಲವೇನಾಯಿತು ಎಂಬುದನ್ನು ಯಾವ ಚರಿತ್ರೆಯ ಪಠ್ಯಪುಸ್ತಕಗಳಲ್ಲೂ ಕಾಣಲಾರೆವು. ಡಾ. ಅಂಬೇಡ್ಕರ್ ಈ ವಿಚಾರಗಳಲ್ಲಿ ತಮ್ಮ ಹೋರಾಟಕ್ಕಾದ ಸೋಲು ಮತ್ತು ತಮ್ಮ ನೋವನ್ನು ದಾಖಲಿಸುವ ಮೂಲಕ ದಲಿತರ ಪಾಲಿನ ಕರಾಳ

ಇತಿಹಾಸವನ್ನು ಸಂಪುಟ 2ರಲ್ಲಿ ಬರೆಯುತ್ತಾರೆ. ಡಾ. ಅಂಬೇಡ್ಕರ್ ಪ್ರಕಾರ ಅಸ್ಪೃಶ್ಯರಿಗೆ ಹಿಂದೂಧರ್ಮ ಮತ್ತು ಹಿಂದೂ ಸಮಾಜದಲ್ಲಿ ಸಮಾನತೆ ಇಲ್ಲ. ಅವರು ಅಸ್ಪೃಶ್ಯರಾಗಿದ್ದಾರೆ. ಏಕೆಂದರೆ ಅವರು ಹಿಂದುಗಳಲ್ಲದವರು ಆದ್ದರಿಂದ ಅವರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ಬೇಕು. ಹಾಗೇ ಅವರು ಹಿಂದೂಗಳಲ್ಲ ಬೌದ್ಧರು ಎಂಬುದಾಗಿತ್ತು. ಇದನ್ನೂ ಡಾ. ಅಂಬೇಡ್ಕರ್ ಮೊದಲ ದುಂಡುಮೇಜಿನ ಪರಿಷತ್ತಿನಲ್ಲಿ ಮಂಡಿಸಿದ್ದರು. ಬ್ರಿಟಿಷರು ಒಪ್ಪಿದ್ದರೂ ಕೂಡ. ಆದರೆ ಗಾಂಧೀಜಿಯವರು ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿದ್ಯ ಕೊಡುವುದರಿಂದ ಅವರು ಹಿಂದೂ ಧರ್ಮ್ಮದಿಂದ ಹೊರಹೋಗುತ್ತಾರೆ. ಅದರಿಂದ ಹಿಂದೂಧರ ಒಡೆದುಹೋಳಾಗುತ್ತದೆ. ಅದನ್ನು ನಾನು ವಿರೋಧಿಸುತ್ತೇನೆಂಬುದು ಅವರ ನಿಲುವಾಗಿತ್ತು.

2ನೇ ದುಂಡುಮೇಜಿನ ಪರಿಷತ್ತಿನಲ್ಲಿ ಈ ವಿಚಾರವಾಗಿ ಒಮ್ಮತ ಮೂಡದೆ ನಿರ್ಧಾರವನ್ನು ಸಮಿತಿ ಅಧ್ಯಕ್ಷರಾದ ಬ್ರಿಟಿಷ್ ಪ್ರಧಾನಿಗೆ ಬಿಡಲಾಗುತ್ತದೆ. 1932 ಆಗಸ್ಟ 17ರಂದು ಬ್ರಿಟಿಷ್ ಪ್ರಧಾನಿ ಕೋಮುವಾರು ನಿರ್ಣಯಗಳನ್ನು ಪ್ರಕಟಿಸುತ್ತಾರೆ. ಅಸ್ಪೃಶ್ಯರ ಜನಸಂಖ್ಯೆಗನುಗುಣವಾಗಿ ದಲಿತರು ಶಾಸನಸಭೆಗಳಿಗೆ ಆಯ್ಕೆಯಾಗಲು ವಿಶೇಷ ಚುನಾಯಕಗಳನ್ನು ನೀಡುವ ಮೂಲಕ ಡಾ. ಅಂಬೇಡ್ಕರ್ ಬೇಡಿಕೆ ಈಡೇರಿತ್ತು. ದಲಿತರು ವಿಶೇಷ ಚುನಾಯಕಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಜೊತೆಗೆ ಸಾಮಾನ್ಯ ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಎರಡನೇ ಮತದಾನದ ಹಕ್ಕನ್ನು ಹೊಂದುವ ಮೂಲಕ ಬೇಡಿಕೆಯು ಈಡೇರಿತ್ತು. ಆದರೂ ಗಾಂಧೀಜಿಯವರು ದಲಿತರಿಗೆ ಡಾ. ಅಂಬೇಡ್ಕರ್ ಹೋರಾಟದ ಫಲವಾಗಿ ದೊರೆತಿದ್ದ ವಿಶೇಷ ಕೋಮುವಾರು ಪ್ರಾತಿನಿಧ್ಯ ನಿರ್ಣಯಗಳ ವಿರುದ್ಧ ಪೂನಾದ ಯರವಾಡ ಜೈಲಿನಲ್ಲಿದ್ದುಕೊಂಡೆ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಕಾಂಗ್ರೆಸ್ ನಾಯಕರು ಮತ್ತು ಕಸ್ತೂರಿಬಾ ಗಾಂಧಿ ಎಲ್ಲರಿಂದ ಗಾಂಧೀಜಿ ಪ್ರಾಣ ಉಳಿಸಲು ದಲಿತರಿಗೆ ಪಡೆದಿದ್ದ ವಿಶೇಷ ಹಕ್ಕುಗಳನ್ನು ಕೈಬಿಡುವಂತೆ ಡಾ. ಅಂಬೇಡ್ಕರ್ ಮೇಲೆ ಒತ್ತಡ ಹೇರಲಾಯಿತು. ಕೊಲೆ ಬೆದರಿಕೆ ಹಾಕಲಾಯಿತು. ಡಾ. ಅಂಬೇಡ್ಕರ್ ಹೇಳುವಂತೆ ಮಾನವೀಯತೆಯ ಕರೆಗೆ ಓಗೊಟ್ಟು ಗಾಂಧೀಜಿ ಪ್ರಾಣ ಉಳಿಸಲು ವಿಶೇಷ ಚುನಾಯಕಗಳನ್ನು ಕೈಬಿಟ್ಟು "ಮೀಸಲಾತಿ ನೀತಿ"ಗೆ ಒಪ್ಪಿಕೊಳ್ಳುವ ಮೂಲಕ 1932 ಸೆಪ್ಟೆಂಬರ್ 24ರಂದು ಪೂನ ಒಪ್ಪಂದಕ್ಕೆ ಡಾ. ಅಂಬೇಡ್ಕರ್ ಸಹಿ ಹಾಕಿದರು. ಇದನ್ನು ಸಂವಿಧಾನದಲ್ಲಿ ಅಳವಡಿಸಲಾಯಿತು. ಇದು ದಲಿತ ಚಳವಳಿ ಮತ್ತು ಹೋರಾಟಗಳನ್ನು ಡಾ. ಅಂಬೇಡ್ಕರ್‌ರವರನ್ನು ಸಂಪೂರ್ಣ ಸೋಲಿಸಿದ ಒಂದು ಚಾರಿತ್ರಿಕ ಘಟ್ಟ. ಈ ವಿಚಾರಗಳ ಚರ್ಚೆಯ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಗಾಂಧೀಜಿಯವರನ್ನು ದಲಿತರ ಪಾಲಿನ ಮೊದಲ ಶತ್ರು ಎಂದರು. ಶ್ರೀಮಾನ್ ಗಾಂಧೀಜಿಯವರು ಡಾ. ಅಂಬೇಡ್ಕರ್‌ಗಿಂತ ನಾನೇ ದಲಿತರ ಸರಿಯಾದ ಪ್ರತಿನಿಧಿ ಎಂದು ಹೇಳಿದರು. ದಲಿತರ ಒಳಿತಿಗಾಗಿ ಈ ಇಬ್ಬರು ಯೋಚಿಸಿದ ಮಾರ್ಗಗಳು ತುಂಬಾ ಭಿನ್ನವಾದದ್ದು. ಇವುಗಳ ವಿಷಯವಾಗಿ ಡಾ. ಅಂಬೇಡ್ಕರ್ ಬರೆದಿರುವಷ್ಟು ಕೂಲಂಕಷವಾಗಿ, ಸ್ಪಷ್ಟವಾಗಿ ನಮ್ಮ ಪಠ್ಯಪುಸ್ತಕಗಳಲ್ಲಿ ಈ ಘಟನೆಗಳ ವಿವರಗಳು ಸಿಗುವುದಿಲ್ಲ. **'ಇತಿಹಾಸ' ಖಚಿತವಾಗಿರಬೇಕು, ಪ್ರಾಮಾಣಿಕವಾಗಿರಬೇಕು, ನಿಷ್ಪಕ್ಷಪಾತಿಯಾಗಿರಬೇಕು, ರಾಗದ್ವೇಷಗಳಿಂಗ ಮುಕ್ತನಾಗಿರಬೇಕು, ಸ್ವಹಿತಾಸಕ್ತಿ, ಭಯ, ಹೇವರಿಕೆ, ಪೂರ್ವಾಗ್ರಹ ಅಥವಾ ಒಲವು ಇವುಗಳಿಂದ ದೂರವಿರಬೇಕು. ಅವನು ಸತ್ಯಕ್ಕೆ ನಿಷ್ಠನಾಗಿರಬೇಕು. ಏಕೆಂದರೆ ಸತ್ಯವೇ ಇತಿಹಾಸದ ತಾಯಿ.**

**ಉಲ್ಲೇಖಗಳು :**


1. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 221
2. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 223
3. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 222
4. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 223
5. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 398
6. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 399
7. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 03, ಪುಟ 399
8. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 398–401
9. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 402–403
10. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 403–405
11. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 409
12. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 417
13. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 602
14. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ 07, ಪುಟ 400–401